

'ಪುನೀತ್ ಉಪಗ್ರಹ' ನಿರ್ಮಾಣಕ್ಕೆ ಮುನ್ನ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಉಪನ್ಯಾಸ



ವಿಜ್ಞಾನಿಗಳ ಜೊತೆ ಭೇಟಿ ಮತ್ತು ಸಂವಾದಕ್ಕೆ ಅವಕಾಶ ಪಡೆಯುತ್ತಾರೆ. ಹೆಚ್ಚಿನ ಆಸಕ್ತಿ ತೋರಿಸುವವರಿಗೆ ಸ್ಪೇಸ್ ಟೆಕ್ನಾಲಜಿ ಕುರಿತು ಉಚಿತ ತರಬೇತಿಯೂ ಸಿಗಲಿದೆ. ಸ್ಪರ್ಧೆಗಳ ವಿಜೇತರಿಗೆ ಪ್ರಮಾಣ ಪತ್ರ–ಬಹುಮಾನಗಳ ಜೊತೆಗೆ ಪುನೀತ್ ಉಪಗ್ರಹ ಉಡಾವಣೆಯನ್ನು ವೀಕ್ಷಿಸಲು ಶ್ರೀಹರಿಕೋಟಾಗೆ ಭೇಟಿ ನೀಡಲು ಅವಕಾಶ ನೀಡಲಾಗುತ್ತದೆ. ವಿದ್ಯಾರ್ಥಿ, ಶಿಕ್ಷಕರು, ಪ್ರಾಚಾರ್ಯರು ಸೇರಿದಂತೆ ಒಟ್ಟು 1000 ಮಂದಿ ಪುನೀತ್ ಉಪಗ್ರಹ ಉಡಾವಣೆಯ ದಿನ ಶ್ರೀಹರಿಕೋಟಾದಲ್ಲಿ ನೇರವಾಗಿ ವೀಕ್ಷಿಸಲಿದ್ದಾರೆ.

## ಯಾರ್‍ಯಾರು ಉಪಗ್ರಹ ಹಾರಿಸಲಿದ್ದಾರೆ?

'ಪುನೀತ್ ಸ್ಯಾಟಲೈಟ್' ಜೊತೆ ಚಂಡೀಗಡ ವಿವಿ, ಎ.ಎಂ.ಸಿ. ಶಿಕ್ಷಣ ಸಂಸ್ಥೆಗಳ ಸಮೂಹ, ಡಾ. ಎಂ.ಜಿ.ಆರ್ ವಿವಿ, ಕರ್ಪಗಂ ಶಿಕ್ಷಣ ಸಂಸ್ಥೆಗಳು, ಬೆಂಗಳೂರಿನ ರಾಜ ರಾಜೇಶ್ವರಿ ಎಂಜಿನಿಯರಿಂಗ್ ಕಾಲೇಜು, ಎನ್‌ಟಿಟಿಎಫ್ ಸಮೂಹ, ನಾಗಾರ್ಜುನ ಶಿಕ್ಷಣ ಸಂಸ್ಥೆ, ಬೆಂಗಳೂರಿನ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳು, ಎಂ.ಎಸ್. ರಾಮಯ್ಯ ವಿ.ವಿ, ಬಿ.ಎಂ.ಎಸ್ ಎಂಜಿನಿಯರಿಂಗ್ ಕಾಲೇಜು, ಸುರತ್ಕಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬಿಎನ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ವೇಮನ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಆಂಧ್ರ ವಿವಿ, ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಗುಜರಾತ್ ವಿವಿ, ಪಿಳ್ಳೈ ಶಿಕ್ಷಣ ಸಮೂಹ, ಅನುರಾಗ್ ಸಮೂಹ ಸಂಸ್ಥೆ, ದಿ ಇಂಡಿಯನ್ ಪಬ್ಲಿಕ್ ಸ್ಕೂಲ್ ಸಮೂಹ, ರಾಜರಾಜೇಶ್ವರಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಜೆಪ್ಪಿಯಾರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎ.ಎಂ.ಸಿ. ಪದವಿ ಪೂರ್ವ ಕಾಲೇಜು, ಗುಜರಾತ್‌ನ ಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ನಿಟ್ಟೆ ವಿಶ್ವವಿದ್ಯಾಲಯ, ವರ್ಧಮಾನ್ ಕಾಲೇಜ್ ಆಫ್ ಎಂಜಿನಿಯರಿಂಗ್, ನೂರ್ ಇಸ್ಲಾ, ಸೆಂಟರ್ ಫಾರ್ ಹೈಯರ್ ಎಜುಕೇಷನ್, ವಿದ್ಯಾವಿಕಾಸ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್, ವಿವೇಕಾನಂದ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಫಾರ್ ವಿಮೆನ್, ಡಾ. ಅಂಬೇಡ್ಕರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮೆನ್ರಾ, ಐಐಟಿ ಗೋವಾ ಮತ್ತು ಗೌಹಾತಿ, ಅಲಿಘರ್ ಮುಸ್ಲಿಂ ವಿವಿ, ಗೋಣಿಕೊಪ್ಪಲಿನ ಕಾವೇರಿ ಪಾಲಿಟೆಕ್ನಿಕ್, ಬೆಂಗಳೂರಿನ ಕೇಂಬ್ರಿಡ್ಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ. ನಾಗಾರ್ಜುನ ಪಿ.ಯು. ಕಾಲೇಜು, ಹಿಂದುಸ್ಥಾನ ಸಮೂಹ ಸಂಸ್ಥೆಗಳೆಲ್ಲ ತಮ್ಮ ತಮ್ಮ ಲ್ಯಾಬ್‌ಗಳಲ್ಲಿ ಉಪಗ್ರಹ ತಯಾರಿಸುತ್ತಿವೆ. ಇವೆಲ್ಲ ಈ ವರ್ಷದ ನವೆಂಬರ್ – ಡಿಸೆಂಬರ್‌ನಿಂದ 2023ರ ಮಧ್ಯದವರೆಗೆ ಮೂರು ಹಂತಗಳಲ್ಲಿ ಬಾಹ್ಯಾಕಾಶಕ್ಕೆ ಹಾರಲಿವೆ.

- ಆಗಸ್ಟ್ 20ರಿಂದ ನವೆಂಬರ್ 20ರವರೆಗೆ ಕರ್ನಾಟಕದ ಎಲ್ಲ ಶಾಲೆ ಕಾಲೇಜುಗಳಲ್ಲಿ ಒಟ್ಟು ನೂರಾ ಇಪ್ಪತ್ತು ದಿನಗಳಲ್ಲಿ ಒಟ್ಟು 100 ಚಟುವಟಿಕೆಗಳನ್ನು ನಡೆಸಲಾಗುತ್ತದೆ. ಚಟುವಟಿಕೆಯಲ್ಲಿ ಭಾಗವಹಿಸಿದ 5 ಅತ್ಯುತ್ತಮ ಶಾಲೆ ಮತ್ತು 5 ಪದವಿ ಪೂರ್ವ ಕಾಲೇಜುಗಳನ್ನು ಗುರುತಿಸಿ ಗೌರವಿಸಲಾಗುತ್ತದೆ.
- 310 ಶಿಕ್ಷಣ ಸಂಸ್ಥೆಗಳ, ಕಾಲೇಜು–ಶಾಲೆಗಳ ಮುಖ್ಯೋಪಾಧ್ಯಾಯರು, ಪ್ರಾಚಾರ್ಯರನ್ನು ಗೌರವಿಸಲಾಗುತ್ತದೆ.
- ಅತ್ಯುತ್ತಮ ಹತ್ತು ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ 'ಕರ್ನಾಟಕ ಅವಾರ್ಡ್' ನೀಡಿ ಸತ್ಕರಿಸಲಾಗುತ್ತದೆ. 20 ಮುಖ್ಯಸ್ಥರನ್ನು ಶ್ರೀಹರಿಕೋಟಾಗೆ ಆಹ್ವಾನಿಸಿ ಉಡಾವಣೆಯ ನೇರ ವೀಕ್ಷಣೆಗೆ ಅವಕಾಶ ನೀಡಲಾಗುತ್ತದೆ.

## ಅಭಿಮಾನ ಮತ್ತು ವಿಜ್ಞಾನ

'ಪುನೀತ್ ಉಪಗ್ರಹ' ಯೋಜನೆಯ ಹಿಂದೆ ಎರಡು ಮುಖ್ಯ ಸಂಗತಿಗಳಿವೆ. ಮೊದಲನೆಯದು, ಅಪ್ಪುಗೆ ಗೌರವ ಸಲ್ಲಿಸುವುದು. ಮತ್ತೊಂದು, ಬಾಹ್ಯಾಕಾಶ ತಂತ್ರಜ್ಞಾನದ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು. ಜನಮನದ ಅಭಿಮಾನ ಮತ್ತು ವಿಜ್ಞಾನವನ್ನು ಸಮನ್ವಯಗೊಳಿಸುವ ಅತ್ಯುತ್ತಮ ಮಾದರಿ 'ಪುನೀತ್ ಉಪಗ್ರಹ'. ಬಾನದಾರಿಯ ಇಂಥ ಮಾದರಿಗಳು ಹೆಚ್ಚಾದಲ್ಲಿ ವಿದ್ಯಾರ್ಥಿಗಳು ವಿಜ್ಞಾನ–ತಂತ್ರಜ್ಞಾನದ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಲು ಪ್ರೇರಣೆಯಾಗುತ್ತವೆ.

ಪ್ರತಿಕ್ರಿಯಿಸಿ: feedback@sudha.co.in